







ಧರಿಸಬಹುದು. ಇವು ಬರೀ ಸಾಂಪ್ರದಾಯಿಕ ಉಡುಗೆಗಳಿಗೆ ಅಷ್ಟೇ ಅಲ್ಲದೆ ಆಧುನಿಕ ಉಡುಪುಗಳಿಗೂ ಸಖತ್ ಮ್ಯಾಚ್ ಆಗುತ್ತದೆ.

ಕಾಲಿನ ಅಂದವನ್ನು ಹೆಚ್ಚಿಸಿಕೊಳ್ಳಲು ಮರದ ಬೀಡ್ಸ್‌ಗಳಿಂದ ತಯಾರಿಸಿದ ಬಣ್ಣ ಬಣ್ಣದ ಆ್ಯಂಕ್ಲೆಟ್‌ಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿದೆ. ಇವಿಷ್ಟೇ ಅಲ್ಲದೆ ಇದೀಗ ಯುವತಿಯರನ್ನು ಆಕರ್ಷಿಸುತ್ತಿರುವ ಜುಮ್ಕಾಗಳು, ಹ್ಯಾಂಗಿಂಗ್ಸ್, ರಿಂಗ್‌ಗಳು, ಸ್ಟಡ್‌ಗಳು ಕೂಡ ಮರದ ಆಭರಣಗಳಲ್ಲಿ ದೊರೆಯುತ್ತಿವೆ.

## ಮರದ ಆಭರಣ ತಯಾರಿಕೆ ಹೇಗೆ?

ಮರದ ಆಭರಣಗಳನ್ನು ಬೇಕಾದ ಆಕಾರ ಹಾಗೂ ರೂಪಗಳಲ್ಲಿ ತಯಾರಿಸಿದ ನಂತರ ಅವುಗಳಿಗೆ ಆಕರ್ಷಕ ಬಣ್ಣಗಳನ್ನು ಕೊಟ್ಟು ನಂತರ ಹೊಳಪನ್ನು ಹೆಚ್ಚಿಸಲು ವಾರ್ನಿಶ್ ಅನ್ನು ಕೊಡಲಾಗುತ್ತದೆ. ಇದರಿಂದ ಆಭರಣಗಳಿಗೆ ಹೊಳಪು ಬರುತ್ತದೆ ಮತ್ತು ಕೊಳೆಯೂ ಆಗುವುದಿಲ್ಲ. ಮರದ ಬೀಡ್ಸ್‌ಗಳಿಂದ ತಯಾರಾದ ಬ್ರೇಸ್ಲೆಟ್‌ಗಳು ಮತ್ತು ಬಳೆಗಳು ಕೂಡ ಟ್ರೆಂಡಿಯಾಗಿವೆ.

ಸಾಕಷ್ಟು ವಿನ್ಯಾಸ ಮತ್ತು ಬಣ್ಣಗಳಲ್ಲಿ ದೊರೆಯುವ ಮರದ ಬಳೆಗಳನ್ನು ಧರಿಸಿ ಸ್ಟೈಲಿಶ್ ಮತ್ತು ಟ್ರೆಂಡಿ ಲುಕ್ ಪಡೆಯಬಹುದು. ಈ ಬಗೆಯ ಆಭರಣಗಳು ಪರಿಸರ ಸ್ನೇಹಿಯಾಗಿದ್ದು, ಚರ್ಮಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಸೀರೆಗಳನ್ನು ಮತ್ತು ದುಪಟ್ಟಾಗಳನ್ನು ಧರಿಸುವಾಗ ಪಿನ್ನುಗಳನ್ನು ಬಳಸುತ್ತೇವೆ. ಅಂತಹ ಸಂದರ್ಭಗಳಲ್ಲಿ ಸಾಧಾರಣ ಪಿನ್ನುಗಳನ್ನು ಬಳಸುವ ಬದಲು ಮರದ ಪೆಂಡೆಂಟುಗಳಿಂದ ತಯಾರಿಸಲಾದ ಬ್ರೋಚುಗಳನ್ನು ಧರಿಸಿಕೊಳ್ಳಬಹುದು.

ಈಗೀಗ ಸಾಕಷ್ಟು ವೆರೈಟಿ ಪೆಂಡೆಂಟ್ ಕೂಡ ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ಅವುಗಳಲ್ಲಿ ನವಿಲಿನ ವಿನ್ಯಾಸದ ಚಾರ್ಮ್ ಪೆಂಡೆಂಟ್, ಪ್ರಾಣಿಗಳ ಮುಖದಂತಿರುವ ಪೆಂಡೆಂಟ್, ಟ್ರೈಬಲ್ ಪೆಂಡೆಂಟುಗಳು ಯುವತಿಯರನ್ನು ತನ್ನತ್ತ ಸೆಳೆಯುತ್ತಿದೆ. ಅಲ್ಲದೆ ಬಂಗಾರದ ತೋಳ್ಬಂದಿಗಳಂತೆಯೇ ಮರದ ತೋಳ್ಬಂದಿಗಳೂ ಕೂಡ ಲಭ್ಯ. ಈ ತರಹದ ತೋಳ್ಬಂದಿ ರೇಷ್ಮೆ ಸೀರೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಗ್ರ್ಯಾಂಡ್ ಪಾರ್ಟಿ, ಮದುವೆಯಂತಹ ಶುಭ ಸಮಾರಂಭಗಳಿಗೂ ಇದನ್ನು ಧರಿಸಬಹುದು.

ಮರದ ಆಭರಣಗಳ ಜೊತೆಗೆ ಮ್ಯಾಚ್ ಮಾಡುವಂತಹ ಉಂಗುರಗಳೂ ದೊರೆಯುತ್ತಿವೆ. ಸುಂದರವಾದ ವಿವಿಧ ಬಗೆಯ ಡಿಸೈನ್‌ಗಳಲ್ಲಿ ದೊರೆಯುವ ಈ ರಿಂಗ್‌ಗಳು ನೋಡಲು ಆಕರ್ಷಕವಾಗಿರುತ್ತವೆ. ಈ ತರಹದ ಆಭರಣಗಳು ಬರೀ ಯುವತಿಯರನ್ನು ಮಾತ್ರವಲ್ಲ ಪುರುಷರನ್ನೂ ಸೆಳೆಯುತ್ತಿವೆ.